(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ:– ಈಗ ನೋಟಿಸ್ ಕೊಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು:– ಈಗ ಕೊಟ್ಟಿಲ್ಲ. ಆಗಲೇ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ:– ನಾವು ಕೊಟ್ಟಮೇಲೆ ಅವರು ಕೊಟ್ಟಿದ್ದಾರೆ. ನಾನು ಈಗ ಮೊದಲು ಪ್ರಸ್ತಾಪ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು:– ಚರ್ಚೆಗೆ ಅವಕಾಶ ಕೊಟ್ಟಿದ್ದೇನೆ. ಪ್ರಶ್ನೋತ್ತರ ಆದ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡೋಣ. ಈಗ ಮೊದಲು ಪ್ರಶ್ನೋತ್ತರ ಮುಗಿಸೋಣ.

4. ಪ್ರಶ್ನೋತ್ತರ

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮೂಲಕ ನೀಡಲಾದ ಉತ್ತರಗಳು.

ಅಧ್ಯಕ್ಷರು:– ಮಾನ್ಯ ರಮೇಶ್ ಬಂಡಿಸಿದ್ದೇಗೌಡರು ಮಾತನಾಡು–ವುದು.

ಶ್ರೀ ಎ.ಬಿ. ರಮೇಶ್ ಬಂಡಿಸಿದ್ದೇಗೌಡ:– ಪ್ರಶ್ನೆ ಸಂಖ್ಯೆ 1(65) ಅನ್ನು ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಿಗೆ ಕೇಳಲು ಇಚ್ಛಿಸುತ್ತೇನೆ.

ಅಧ್ಯಕ್ಷರು:– ಮಾನ್ಯ ಸಚಿವರು ಉತ್ತರ ಕೊಡಲು ಕಾಲಾವಕಾಶ ಕೇಳಿದ್ದಾರೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ:– ಐತಿಹಾಸಿಕ ಅಧಿವೇಶನದ ಮೊದಲನೇ ಪ್ರಶ್ನೆಗೇ ಸರ್ಕಾರ ಕಾಲಾವಕಾಶ ಕೇಳಿದರೆ ನಾವು ಏನು ಮಾಡಬೇಕು?

(ಗೊಂದಲ)

ಅಧ್ಯಕ್ಷರು:– ಸಚಿವರು ಎಲ್ಲಿದ್ದಾರೆ? ಈ ಪ್ರಶ್ನೆಯನ್ನು ನಾನು ಸ್ವಲ್ಪ ಓದುತ್ತೇನೆ.

(ಅ) ರಾಜ್ಯಾದ್ಯಂತ ಇರುವ ಒಟ್ಟು ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು (ಗ್ರಾಮವಾರು, ಸ್ಥಳವಾರು ವಿವರ ನೀಡುವುದು): ಈ ಪ್ರಶ್ನೆಗೆ ಸಚಿವರು ಉತ್ತರ ಕೊಡಲು ಏನು ಕಷ್ಟ? ವೆಬ್‌ಸೈಟ್‌ನಲ್ಲಿ ಮಾಹಿತಿ ಇರುತ್ತದೆ. ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಕೇಳುತ್ತೇನೆ. Simple question 15 ದಿವಸ ಕಾಲಾವಕಾಶ ಕೇಳುತ್ತಾರೆ. Concerned officers ಮೇಲೆ action ತೆಗೆದು–ಕೊಳ್ಳಬೇಕು. ಎರಡನೇ ಪ್ರಶ್ನೆ, ಈ ಪೈಕಿ ಸ್ವಂತ ಕಟ್ಟಡಗಳಲ್ಲಿ ಹಾಗೂ ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಅಂಗನವಾಡಿ ಕೇಂದ್ರಗಳೆಷ್ಟು ಹಾಗೂ ಅವು ಯಾವುವು (ಕ್ಷೇತ್ರವಾರು ವಿವರ ನೀಡುವುದು): ಇದಕ್ಕೆ ಉತ್ತರ ಕೊಡಲು ಏನು ಕಷ್ಟ? ವಿಧಾನಸಭೆಗೆ ಉತ್ತರ ಕೊಡುವುದಕ್ಕೂ ಅಸಡ್ಡೆ ಮಾಡುವುದಾದರೆ, I request you to take action against the concerned. ಈ ರೀತಿ 15 ದಿವಸ ಕಾಲಾವಕಾಶ ಕೇಳುವುದು ಸರಿಯಲ್ಲ. ಯಾವ ಪ್ರಶ್ನೆಗೆ ಕಾಲಾವಕಾಶ ಕೇಳಬೇಕೋ ಅದಕ್ಕೆ ಕೇಳಲಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ:– ಉತ್ತರ ಕೊಡುವುದಕ್ಕೆ ಒಂದು ವಾರ ಕಾಲಾವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು:– ಆಯಿತು. 7ನೇ ತಾರೀಖು ಸಚಿವರು ಉತ್ತರ ಕೊಡ–ಬೇಕು.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್:– ಮೊದಲನೆ ದಿನವೇ ಸರ್ಕಾರ ಉತ್ತರ ಕೊಟ್ಟಿಲ್ಲ.

(ಗೊಂದಲ)

ಅಧ್ಯಕ್ಷರು:– 7ನೇ ತಾರೀಖು ಉತ್ತರ ಕೊಡುತ್ತಾರೆ. ಮಾನ್ಯ ರಹೀಂ–ಖಾನ್‌ರವರು ಮಾತನಾಡುವುದು.